ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆನಂದರಾವ್ ವೃತ್ತ, ಬೆಂಗಳೂರು–560 009

ಸಂಖ್ಯೆ: ಆ.ಕು.ಕ/ಶುಚಿ/03/2016–17 ದಿನಾಂಕ: 21–09–2016.

## :: ಮಾರ್ಗಸೂಚಿ ::

**ವಿಷಯ:– 2016–17ನೇ ಸಾಲಿನ "ಶುಚಿ" ಯೋಜನೆ ಅನುಷ್ಠಾನದ ಮಾರ್ಗಸೂಚಿಯ ಕುರಿತು.**

**ಪರಿಚಯ:**

ಮಹಿಳೆಯರು ಹಾಗೂ ಹದಿಹರೆಯದ ಹೆಣ್ಣು ಮಕ್ಕಳು ಋತುಕಾಲದ ಸಮಯದಲ್ಲಿ ಉತ್ತಮ ಶುಚಿತ್ವ ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳುವ ಅವಶ್ಯಕತೆ ಇರುತ್ತದೆ.

ಹದಿಹರೆಯದ ಹೆಣ್ಣು ಮಕ್ಕಳು ಋತುಕಾಲದ ಸಮಯದಲ್ಲಿ ಶುಚಿತ್ವವಿಲ್ಲದ ಅಭ್ಯಾಸಗಳಿಂದ ಉಂಟಾಗಬಹುದಾದ ಸೋಂಕುಗಳಿಂದ ಶಾಲೆಗೆ ಗೈರು ಹಾಜರಾಗುವುದು ಕಂಡು ಬರುತ್ತದೆ. ಹಾಗೂ ತಮ್ಮದೈನಂದಿನ ಆರ್ಥಿಕ / ಕೌಟುಂಬಿಕ ಚಟುವಟಿಕೆಗಳಿಂದ ದೂರ ಉಳಿಯಬಹುದು. ಈ ಕಾರಣಕ್ಕಾಗಿ ಋತುಸ್ರಾವದ ಕುರಿತು ಇರುವ ಅವೈಜ್ಞಾನಿಕ ಅಭಿಪ್ರಾಯ / ನಂಬಿಕೆಗಳನ್ನು ದೂರಗೊಳಿಸಿ ಶುಚಿತ್ವ ಹಾಗೂ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಬಳಕೆಯ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಹಮ್ಮಿಕೊಳ್ಳುವ ಮೂಲಕ ಒಟ್ಟು ಜನಸಂಖ್ಯೆಯ ಪ್ರತಿಶತ 22% ರಷ್ಟಿರುವ ಹದಿಹರೆಯದ ಹೆಣ್ಣುಮಕ್ಕಳ ಆರೋಗ್ಯ, ಶಾಲಾ ಹಾಜರಾತಿ, ಸುಧಾರಿಸುವ ಯೋಜನೆ ಹಮ್ಮಿಕೊಳ್ಳುವ ಅವಶ್ಯಕತೆಯನ್ನು ಮನಗಾಣಲಾಗಿರುತ್ತದೆ.

ಸಾಮಾನ್ಯವಾಗಿ ಹೆಚ್ಚಿನ ಮಹಿಳೆಯರು ಋತುಸ್ರಾವದ ಶುಚಿತ್ವದ ಆದ್ಯತೆ, ಅರಿವಿಲ್ಲದೇ ಹಾಗೂ ಹಣದಕೊರತೆಯಿಂದ ಋತುಸ್ರಾವದ ಸಮಯದಲ್ಲಿ ಮನೆಯಲ್ಲಿರುವ ಹಳೇ/ ಹರಿದ ಬಟ್ಟೆಯನ್ನು ಉಪಯೋಗಿಸುತ್ತಾರೆ. ಈ ಬಟ್ಟೆಯನ್ನು ತೊಳೆದು ಬಿಸಿಲಿನಲ್ಲಿ ಒಣಗಿಸದೇ, ಕುಟುಂಬದ ಎಲ್ಲರೂ ಪುನರ್ ಬಳಕೆ ಮಾಡುತ್ತಾರೆ. ಇದರಿಂದಾಗಿ ಬಟ್ಟೆಯು ಪೂರ್ಣವಾಗಿ ಒಣಗದೇ ಚರ್ಮದ ಸೋಂಕು ಉಂಟಾಗುವ ಹಾಗೂ ಒಬ್ಬರಿಂದೊಬ್ಬರಿಗೆ ಸೋಂಕು ಹರಡುವ ಅವಕಾಶವಿರುತ್ತದೆ.

ಋತುಸ್ರಾವದ ಶುಚಿತ್ವವನ್ನು ಅನುಸರಿಸುವುದು ಹದಿಹರೆಯದ ಹೆಣ್ಣುಮಕ್ಕಳಿಗಲ್ಲದೆ ಮಹಿಳೆಯರಿಗೂ ಸಹ ಅವಶ್ಯಕತೆಯಿರುತ್ತದೆ. ಆದರೆ, ಪ್ರಾರಂಭಿಕ ಹಂತದಲ್ಲಿ ಈ ಕಾರ್ಯಕ್ರಮವನ್ನು ಹದಿಹರೆಯದ ಹೆಣ್ಣುಮಕ್ಕಳಿಗಾಗಿ ಹಮ್ಮಿಕೊಂಡು ತದನಂತರ ಉಳಿದ ಮಹಿಳೆಯರಿಗೆ ವಿಸ್ತರಿಸಬಹುದು. ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ರಾಜ್ಯದ ಹಂತದಲ್ಲಿ ಖರೀದಿಸಿ, ಜಿಲ್ಲೆಗಳಿಗೆ ಸರಬರಾಜು ಮಾಡಿ ಹದಿಹರೆಯದ ಹೆಣ್ಣುಮಕ್ಕಳಿಗೆ ಉಚಿತವಾಗಿ ತಲುಪುವಂತೆ ಮಾಡಿದಲ್ಲಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ಜನನಾಂಗ ಮತ್ತು ಲೈಂಗಿಕ ಸೋಂಕನ್ನು ತಡೆಗಟ್ಟಿ ತಾಯಿಮಕ್ಕಳ ಆರೋಗ್ಯ ಸುಧಾರಿಸಲು ಸಹಾಯವಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಕರ್ನಾಟಕ ಸರ್ಕಾರ ರಾಜ್ಯದ ಎಲ್ಲಾ ಹದಿಹರೆಯದ ಹೆಣ್ಣುಮಕ್ಕಳಿಗೆ/ ಮಹಿಳೆಯರಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ನೀಡಲು **"ಶುಚಿ"** ಯೋಜನೆಯನ್ನು 2013–14 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.

ಉದ್ದೇಶ:

- ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವ ಬಗ್ಗೆ ಅರಿವು ಮೂಡಿಸುವುದು.
- ಹದಿಹರೆಯದವರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಬಳಕೆ ಹಾಗೂ ಉಪಯೋಗದ ಬಗ್ಗೆ ತಿಳುವಳಿಕೆ ನೀಡುವುದು.
- ಹದಿಹರೆಯದವರಲ್ಲಿ ಋತುಸ್ರಾವ ನೈರ್ಮಲ್ಯದ ಕುರಿತು ದೃಷ್ಟಿಕೋನ ಬದಲಾಯಿಸುವುದು.
- ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದರ ಮುಖಾಂತರ ಬಳಕೆಯನ್ನು ಪ್ರೋತ್ಸಾಹಿಸುವುದು.

ಫಲಾನುಭವಿಗಳು:

- ಸರ್ಕಾರಿ, ಅನುದಾನಿತ ಹಾಗೂ ವಸತಿ ಶಾಲೆಯ 6ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹದಿಹರೆಯದ ಹೆಣ್ಣುಮಕ್ಕಳು.
- ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣು ಮಕ್ಕಳು.
- ಸಮಾಜ ಕಲ್ಯಾಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಬರುವ ಶಾಲೆಗಳು ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿನ ಹದಿಹರೆಯದ ಹೆಣ್ಣುಮಕ್ಕಳು.

ಸರಬರಾಜು:

ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೂಳಿಸಲಾಗುತ್ತಿದ್ದು, **"ಶುಚಿ"** ಎಂಬ ಹೆಸರಿನ ಸ್ಯಾನಿಟರಿ ಪ್ಯಾಡ್‌ಗಳ ಪ್ಯಾಕೆಟ್‌ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಜ್ಯಮಟ್ಟದಲ್ಲಿ ಖರೀದಿಸಿ ನೇರವಾಗಿ ಜಿಲ್ಲೆಗಳ ಮುಖಾಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ಆರ್.ಸಿ.ಹೆಚ್. ಅಧಿಕಾರಿಯವರ ಮಾರ್ಗದರ್ಶನದಂತೆ ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ಸರಬರಾಜು ಮಾಡಲಾಗುತ್ತದೆ.

ಸಂಸ್ಥೆಯವರು ಸಲ್ಲಿಸುವ ಬಿಲ್ಲುಗಳ ಮೇಲೆ ಜಿಲ್ಲಾ ಮಟ್ಟದಲ್ಲಿಯೇ ದಾಸ್ತಾನು ಸ್ವೀಕರಿಸಿದ ಕುರಿತು ದೃಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಮೇಲು ರುಜು ಮಾಡಿ ಯೋಜನಾ ನಿರ್ದೇಶಕರು(ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರಿಗೆ ಸಲ್ಲಿಸಲು ಈ ಮೂಲಕ ಆದೇಶಿಸಿದೆ.

ಸದರಿ ತಾಲ್ಲೂಕುಗಳಿಗೆ ಸರಬರಾಜು ಆದ ಸ್ಯಾನಿಟರಿ ಪ್ಯಾಡ್‌ಗಳನ್ನು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಾಸ್ತಾನು ಮಾಡಿಕೊಳ್ಳುವುದು ಹಾಗೂ ಒಂದು ವಾರದೊಳಗೆ ಸದರಿ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಸಹ ಇಲಾಖೆಗಳೊಂದಿಗೆ ಸಮನ್ವಯ ಸಮಿತಿಯ ಸಭೆಯನ್ನು ಮಾಡಿ, ಸಹ ಇಲಾಖೆಗಳಿಂದ ಪರಿಶಿಷ್ಟಜಾತಿ / ಗಿರಿಜನ (SCP/ TSP)ಗಳ ಪ್ರಕಾರವೇ ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಂಡು, ಪಟ್ಟಿಯ ಪ್ರಕಾರ ಸ್ಯಾನಿಟರಿ ಪ್ಯಾಡ್‌ಗಳ ಪ್ಯಾಕೆಟ್‌ಗಳನ್ನು ಹಂಚಿಕೆ ಮಾಡುವುದು**(ನಮೂನೆಯನ್ನು ಲಗತ್ತಿಸಿದೆ)**.

ಸಹ ಇಲಾಖೆಗಳು ಪಡೆದುಕೊಂಡ ಸ್ಯಾನಿಟರಿ ಪ್ಯಾಡ್‌ಗಳನ್ನು ಫಲಾನುಭವಿಗಳಿಗೆ ಒಂದು ವಾರದೊಳಗೆ ವಿಲೇವಾರಿ ಮಾಡುವುದು ಹಾಗೂ ಯಾವುದೇ ಕಾರಣಕ್ಕೂ ಸಂಬಂಧಪಟ್ಟ ಸಂಸ್ಥೆಗಳಲ್ಲಿ ದಾಸ್ತಾನು ಉಳಿಸಿಕೋಳ್ಳುವಂತ್ತಿಲ್ಲ. ಒಂದು ವೇಳೆ ದಾಸ್ತಾನು ಉಳಿಸಿಕೊಂಡಿದ್ದಲ್ಲಿ, ಅವದಿಮೀರಿದ ಪ್ಯಾಡ್‌ಗಳು ಇದ್ದಲ್ಲಿ ಹಾಗೂ ದುರುಪಯೋಗವಾದಲ್ಲಿ ಸಂಸ್ಥೆಯ ಮುಖ್ಯಸ್ಥರೆ ನೇರಹೂಣೆಗಾರರಾಗಿರುತ್ತಾರೆ.

ಸರಬರಾಜಾದ ಮತ್ತು ವಿಲೇವಾರಿ ಮಾಡಿದ ಸ್ಯಾನಿಟರಿ ಪ್ಯಾಡ್‌ಗಳನ್ನು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಹಾಗೂ ಸಹ ಇಲಾಖೆಯ ಅಧಿಕಾರಿಗಳು ದಾಸ್ತಾನು ಪುಸ್ತಕವನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದು ಹಾಗೂ ಆಯಾ ಸಂಸ್ಥೆಗಳಲ್ಲಿ ದಾಸ್ತಾನು ಪುಸ್ತಕವನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದು. **"ಶುಚಿ" ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ 10 ಸ್ಯಾನಿಟರಿ ಪ್ಯಾಡುಗಳು ಇರುವ ಒಂದು ಪ್ಯಾಕೇಟ್ ಅನ್ನು ತಿಂಗಳಿಗೆ ಒಂದರಂತೆ ನೀಡುವುದು.**

**ನ್ಯಾಪ್‌ಕಿನ್‌ಗಳ ಬೇಡಿಕೆ:**

ಜಿಲ್ಲೆಯಲ್ಲಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸಹ ಇಲಾಖೆಗಳಾದ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರೊಂದಿಗೆ ಸಭೆ ನಡೆಸಿ, ತಾಲ್ಲೂಕುವಾರು ಪರಿಶಿಷ್ಟಜಾತಿ/ ಗಿರಿಜನ(SCP/ TSP) ಗಳ ಪ್ರಕಾರವೇ ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಂಡು ಕ್ರಿಯಾಯೋಜನೆಯನ್ನು(MICRO PLAN) ಸಿದ್ಧಪಡಿಸಿಕೊಂಡು ವಿಲೇವಾರಿ ಮಾಡತಕ್ಕದ್ದು.

**ಸಂಗ್ರಹಣೆ:**

- ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಸಂಗ್ರಹಣೆ ಮಾಡುವ ಕೊಠಡಿಗಳು ತೇವಾಂಶದಿಂದ, ಇಲಿಗಳಿಂದ ಮುಕ್ತವಾಗಿರಬೇಕು ಮತ್ತು ನೆಲ ಮಟ್ಟದಿಂದ ಸುಮಾರು 1/2 ಅಡಿ ಎತ್ತರದಲ್ಲಿರಬೇಕು.
- ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಸರಬರಾಜು ಆದ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ತಾತ್ಕಾಲಿಕ ದಾಸ್ತಾನು ಮಾಡಿ ಒಂದು ವಾರದೊಳಗೆ ಸಹ ಇಲಾಖೆಯ ತಾಲ್ಲೂಕು ಅಧಿಕಾರಿಗಳ ಮುಖಾಂತರ ಫಲಾನುಭವಿಗಳಿಗೆ ವಿತರಿಸತಕ್ಕದ್ದು.

**ಬಳಕೆಯಾದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ವಿಲೇವಾರಿ:**

- ಶಾಲೆಗಳಲ್ಲಿ ಮತ್ತು ಗ್ರಾಮಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸೂಕ್ತ ವಿಲೇವಾರಿ ಮಾಡುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಕ್ರಮ ವಹಿಸತಕ್ಕದ್ದು.
- ಉಪಯೋಗಿಸಲ್ಪಟ್ಟ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಗ್ರಾಮದಲ್ಲಿ ಆಳವಾಗಿ ಹೂಳುವುದರ ಮೂಲಕ ಅಥವಾ ಸುಡುವುದರ ಮೂಲಕ ವಿಲೇವಾರಿ ಮಾಡುವುದು.

**ದಾಖಲಾತಿ:**

ಸಂಬಂಧಪಟ್ಟ ಇಲಾಖೆಗಳಿಂದ ಪರಿಶಿಷ್ಟಜಾತಿ/ ಗಿರಿಜನ(SCP/ TSP) ಗಳ ಪ್ರಕಾರವೇ ಫಲನಾನುಭವಿಗಳ ಮಾಹಿತಿಯನ್ನು ಪಡೆದು ಸ್ಯಾನಿಟರಿ ನ್ಯಾಪ್‌ಕಿನ್‌ಗಳ ವಿತರಣೆ, ಸಂಗ್ರಹಣೆ ಮತ್ತು ನಿರ್ವಹಣೆ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಸಹ ಇಲಾಖೆಯ ಅಧಿಕಾರಿಗಳೊಂದಿಗೆ ನಿರ್ವಹಿಸುವುದು.

ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಖರ್ಚಾದ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ನಿಗದಿತ ನಮೂನೆಗಳಲ್ಲಿ ಸಹಿಯಾದ ಮಾಸಿಕ ವರದಿಗಳನ್ನು ಪಡೆದು, ಕ್ರೂಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸುವುದು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಾಲ್ಲೂಕುವಾರು ಸಹಿಯಾದ ಮಾಸಿಕ ವರದಿಗಳನ್ನು ಸಂಗ್ರಹಿಸಿ, ಕ್ರೂಢೀಕರಿಸಿ ರಾಜ್ಯ ನೋಡಲ್ ಅಧಿಕಾರಿಗಳು, **"ಶುಚಿ"** ಕಾರ್ಯಕ್ರಮ ಇವರಿಗೆ ಇ–ಮೇಲ್ ಮುಖಾಂತರ **rksk.karnataka@gmail.com** ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಸಲ್ಲಿಸುವುದು.

ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲಾ ನಮೂನೆಯನ್ನು ಮಾರ್ಗಸೂಚಿಯೊಂದಿಗೆ ಲಗತ್ತಿಸಿದೆ.

**ಸಮಿತಿ:**

ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ಸಮನ್ವಯ ಸಮಿತಿಯನ್ನು ರಚಿಸಿ, ಪ್ರತಿ ತಿಂಗಳು ಮಾಸಿಕ ಸಭೆಯನ್ನು ನಡೆಸಿ, ಕಾರ್ಯಕ್ರಮದ ಬಗ್ಗೆ ಚರ್ಚಿಸಿ ನ್ಯೂನತೆಗಳು ಕಂಡುಬಂದಲ್ಲಿ ಸಮಿತಿಯ ನಿರ್ಣಯದೊಂದಿಗೆ ಸೂಕ್ತ ಕ್ರಮ ವಹಿಸಬೇಕು.

**ಜಿಲ್ಲಾ ಮಟ್ಟದ ಸಮಿತಿ:-**

| | |
|---|---|
| ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | - ಅಧ್ಯಕ್ಷರು |
| ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು | - ಸದಸ್ಯ ಕಾರ್ಯದರ್ಶಿ |
| ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | - ಸದಸ್ಯರು |
| ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಮತ್ತು ಡಿ.ಪಿ.ಎಂ.ಓ. | - ಸದಸ್ಯರು |
| ಉಪ ನಿರ್ದೇಶಕರು ಶಿಕ್ಷಣ ಇಲಾಖೆ (ಡಿ.ಡಿ.ಪಿ.ಐ) | - ಸದಸ್ಯರು |
| ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು | - ಸದಸ್ಯರು |
| ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು | - ಸದಸ್ಯರು |
| ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು | - ಸದಸ್ಯರು |
| ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳು | - ಸದಸ್ಯರು |

**ತಾಲ್ಲೂಕ ಮಟ್ಟದ ಸಮಿತಿ:-**

| | |
|---|---|
| ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ | - ಅಧ್ಯಕ್ಷರು |
| ತಾಲ್ಲೂಕು ಆರೋಗ್ಯ ಅಧಿಕಾರಿಗಳು | - ಸದಸ್ಯ ಕಾರ್ಯದರ್ಶಿ |
| ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು (ಸಿ.ಡಿ.ಪಿ.ಓ) | - ಸದಸ್ಯರು |
| ತಾಲ್ಲೂಕು ಶಿಕ್ಷಣ ಇಲಾಖೆಯ ಅಧಿಕಾರಿಗಳು (ಬಿ.ಇ.ಓ) | - ಸದಸ್ಯರು |
| ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು | - ಸದಸ್ಯರು |
| ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು | - ಸದಸ್ಯರು |
| ತಾಲ್ಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು | - ಸದಸ್ಯರು |
| ತಾಲ್ಲೂಕು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳು | - ಸದಸ್ಯರು |

**ಮೇಲ್ವಿಚಾರಣೆ:**

1) **ರಾಜ್ಯ ಮಟ್ಟದಲ್ಲಿ:**

- ನೋಡಲ್ ಅಧಿಕಾರಿಗಳು, **"ಶುಚಿ"** ಕಾರ್ಯಕ್ರಮ, ಇವರು ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಬೇಡಿಕೆಯ ಪಟ್ಟಿಯನ್ನು ತಯಾರಿಸಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ಅನುಮೋದನೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.
- ಜಿಲ್ಲೆಗಳಿಂದ ಬಂದ ಮಾಸಿಕ ವರದಿಗಳನ್ನು ಕ್ರೂಢೀಕರಿಸಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವುದು.
- ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಸಹ ಇಲಾಖೆಗಳ ರಾಜ್ಯ ಮಟ್ಟದ ಅಧಿಕಾರಿಗಳೊಂದಿಗೆ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸುವುದು.
- ಸರಿಯಾದ ಸಮಯಕ್ಕೆ ಬೇಡಿಕೆ ಪಟ್ಟಿಯಂತೆ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಸರಬರಾಜು ಮಾಡುವುದು.

2) ಜಿಲ್ಲಾ ಮಟ್ಟದಲ್ಲಿ:

- ಜಿಲ್ಲೆಯ ಆರ್.ಸಿ.ಹೆಚ್ ಅಧಿಕಾರಿಗಳು "ಶುಚಿ" ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾಗಿರುತ್ತಾರೆ.
- ತಾಲ್ಲೂಕು ಆರೋಗ್ಯ ಅಧಿಕಾರಿಗಳಿಂದ ಬಂದ ಮಾಸಿಕ ವರದಿಗಳನ್ನು ಕ್ರೂಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಹಿ ಪಡೆದು ರಾಜ್ಯ ನೋಡಲ್ ಅಧಿಕಾರಿಗಳು, "ಶುಚಿ" ಕಾರ್ಯಕ್ರಮ, ಇವರಿಗೆ ಸಲ್ಲಿಸುವುದು.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಕಡ್ಡಾಯವಾಗಿ ನಡೆಸುವುದು.
- ಪ್ರತಿ ತಿಂಗಳು ಆಯ್ದ ಶಾಲೆಗಳಿಗೆ ಮತ್ತು ಉಳಿದ ಸಹ ಇಲಾಖೆಗಳ ಸಂಸ್ಥೆಗಳಿಗೆ ಭೇಟಿ ನಿಡಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ನಡೆಸತಕ್ಕದ್ದು.
- ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸರಬರಾಜು ಆದ ಬಗ್ಗೆ ಮತ್ತು ಫಲಾನುಭವಿಗಳಿಗೆ ತಲುಪಿದ ಬಗ್ಗೆ, ಶೇಖರಣೆ ಮಾಡಿರುವ ಸ್ಥಳದ ಬಗ್ಗೆ ಮೇಲ್ವಿಚಾರಣೆ ನಡೆಸತಕ್ಕದ್ದು.
- ಸದರಿ ಜಿಲ್ಲೆಗಳಿಗೆ ಸರಬರಾಜು ಮಾಡಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಗುಣಮಟ್ಟ ಹಾಗೂ ಪರಿಮಾಣವನ್ನು ಪರಿಶೀಲಿಸಿ ನಗದು ರಸೀದಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದೃಢೀಕರಿಸತಕ್ಕದ್ದು.

3) ತಾಲೂಕ ಮಟ್ಟದಲ್ಲಿ:

- ತಾಲ್ಲೂಕು ಆರೋಗ್ಯ ಅಧಿಕಾರಿಗಳು "ಶುಚಿ" ಕಾರ್ಯಕ್ರಮದ ತಾಲ್ಲೂಕು ನೋಡಲ್ ಅಧಿಕಾರಿಗಳಾಗಿರುತ್ತಾರೆ.
- ಸಂಬಂಧಪಟ್ಟ ಇಲಾಖೆಗಳಿಂದ ತೆಗೆದುಕೊಂಡ ಫಲಾನುಭವಿಗಳ ಪಟ್ಟಿಯನ್ನು ಕ್ರೂಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ಸಲ್ಲಿಸುವುದು.
- ಸಂಬಂಧಪಟ್ಟ ಇಲಾಖೆಗಳಿಂದ ನೀಡಿದ ಫಲಾನುಭವಿಗಳ ಪಟ್ಟಿಯಂತೆ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ವಿಲೇವಾರಿ ಮಾಡುವುದು.
- ನಿಗದಿತ ನಮೂನೆಯಲ್ಲಿ ಮಾಸಿಕ ವರದಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ತರಸಿಕೊಂಡು ಕ್ರೂಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಇವರಿಗೆ ಸಲ್ಲಿಸುವುದು.
- ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಇವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸುವುದು.
- ಪ್ರತಿ ತಿಂಗಳು ಆಯ್ದ ಶಾಲೆಗಳಿಗೆ ಮತ್ತು ಉಳಿದ ಸಹ ಇಲಾಖೆಗಳ ಸಂಸ್ಥೆಗಳಿಗೆ ಭೇಟಿ ನೀಡಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ನಡೆಸತಕ್ಕದ್ದು.
- ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸರಬರಾಜು ಆದ ಬಗ್ಗೆ ಮತ್ತು ಫಲಾನುಭವಿಗಳಿಗೆ ತಲುಪಿದ ಬಗ್ಗೆ, ಶೇಖರಣೆ ಮಾಡಿರುವ ಸ್ಥಳದ ಬಗ್ಗೆ ಮೇಲ್ವಿಚಾರಣೆ ನಡೆಸತಕ್ಕದ್ದು.
- ಸದರಿ ತಾಲ್ಲೂಕುಗಳಿಗೆ ಸರಬರಾಜು ಮಾಡಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಗುಣಮಟ್ಟ ಹಾಗೂ ಪರಿಮಾಣವನ್ನು ಪರಿಶೀಲಿಸಿ ಸ್ವಿಕರೀಸಿದ ಬಗ್ಗೆ ನಗದು ರಸೀದಿಗಳನ್ನು ತಾಲ್ಲೂಕು ಆರೋಗ್ಯ ಅಧಿಕಾರಿಗಳು ಧೃಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಅಧಿಕಾರಿಗಳಿಗೆ ಕಡ್ಡಾಯವಾಗಿ ಸಲ್ಲಿಸುವುದು.

**ಸಹ ಇಲಾಖೆಗಳ ಜವಾಬ್ದಾರಿಗಳು:**

**ಸಹ ಇಲಾಖೆಗಳು ಈ ಕೆಳಕಂಡಂತಿವೆ:**

- ಶಿಕ್ಷಣ ಇಲಾಖೆ
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
- ಸಮಾಜ ಕಲ್ಯಾಣ ಇಲಾಖೆ
- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
- ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ಜವಾಬ್ದಾರಿಗಳು:**

- ರಾಜ್ಯ ಮಟ್ಟದ ಅಧಿಕಾರಿಗಳು **"ಶುಚಿ"** ಕಾರ್ಯಕ್ರಮದ ಅನುಷ್ಠಾನದ ಮಾರ್ಗಸೂಚಿಯಂತೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಆದೇಶಿಸುವುದು.
- ಸದರಿ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು **"ಶುಚಿ"** ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜವಾಬ್ದಾರರಾಗಿರುತ್ತಾರೆ.
- **"ಶುಚಿ"** ಕಾರ್ಯಕ್ರಮದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುವ ಪ್ರಗತಿ ಪರಿಶಿಲನಾ ಸಭೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.
- ಸದರಿ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ತಿಂಗಳಿಗೆ ಬೇಕಾಗುವ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಬೇಡಿಕೆಯ ಪಟ್ಟಿಯನ್ನು ಪರಿಶಿಷ್ಠಜಾತಿ/ ಗಿರಿಜನ(SCP/ TSP) ಗಳ ಪ್ರಕಾರವೇ ತಯಾರಿಸಿ ತಾಲ್ಲೂಕು ಆರೋಗ್ಯ ಅಧಿಕಾರಿಯವರಿಗೆ ಸಲ್ಲಿಸುವುದು.
- ಸದರಿ ಇಲಾಖೆಗಳು ತಮಗೆ ಸಂಬಂಧಪಟ್ಟ ಸಂಸ್ಥೆಗಳಲ್ಲಿ (ಶಾಲೆ/ ವಸಿತಿನಿಲಯ/ಅಂಗನವಾಡಿ ಕೇಂದ್ರ) ನೋಡಲ್ ಅಧಿಕಾರಿಗಳನ್ನು ನೇಮಿಸಿ ಕಾರ್ಯಕ್ರಮದ ಜವಾಬ್ದಾರಿಯನ್ನು ವಹಿಸತಕ್ಕದ್ದು.
- ಸದರಿ ಸಂಸ್ಥೆಗಳ ನೋಡಲ್ ಅಧಿಕಾರಿಗಳು ಸ್ವಿಕರಿಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೇಟ್‌ಗಳನ್ನು ಏಳು ದಿನಗಳಲ್ಲಿ ಫಲಾನುಭವಿಗಳಿಗೆ ಕಡ್ಡಾಯವಾಗಿ ಹಂಚಿಕೆ ಮಾಡಲೆಬೇಕು ಹಂಚಿಕೆ ಮಾಡದೆ ಇದ್ದಲ್ಲಿ ಅಥವಾ ಅವಧಿವಿರಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೇಟ್‌ಗಳು ಉಳಿದಲ್ಲಿ ನೋಡಲ್ ಅಧಿಕಾರಿಗಳು ನೇರಹೂಣೆಗಾರರಾಗಿರುತ್ತಾರೆ.
- ಸದರಿ ಸಂಸ್ಥೆಗಳ ನೋಡಲ್ ಅಧಿಕಾರಿಗಳು **"ಶುಚಿ"** ಕಾರ್ಯಕ್ರಮದ ಮಾಸಿಕ ವರದಿಗಳನ್ನು ಕಡ್ಡಾಯವಾಗಿ ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಹಾಗೂ ಸಹಿಮಾಡಿ ಪ್ರತಿ ತಿಂಗಳು 3ನೇ ತಾರಿಕಿನೋಳಗಾಗಿ ತಾಲ್ಲೂಕ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸುವುದು.
- ಸದರಿ ಇಲಾಖೆಗಳು ತಮಗೆ ಸಂಬಂಧಪಟ್ಟ ಆಯ್ದ ಸಂಸ್ಥೆಗಳಿಗೆ ಪ್ರತಿ ತಿಂಗಳು ಭೇಟಿ ನೀಡಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ನಡೆಸತಕ್ಕದ್ದು.
- ಸದರಿ ಇಲಾಖೆಗಳು ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸರಬರಾಜು ಆದ ಬಗ್ಗೆ ಮತ್ತು ಫಲಾನುಭವಿಗಳಿಗೆ ತಲುಪಿದ ಬಗ್ಗೆ, ಶೇಖರಣೆ ಮಾಡಿರುವ ಸ್ಥಳದ ಬಗ್ಗೆ ಮೇಲ್ವಿಚಾರಣೆ ನಡೆಸತಕ್ಕದ್ದು.
- ಸದರಿ ಇಲಾಖೆಗಳು ಸರಬರಾಜು ಆದ ಮತ್ತು ವಿಲೇವಾರಿ ಮಾಡಿದ ಸ್ಯಾನಿಟರಿ ಪ್ಯಾಡ್‌ಗಳನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ದಾಸ್ತಾನು ಪುಸ್ತಕವನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದು ಹಾಗೂ ಆಯಾ ಸಂಸ್ಥೆಗಳಲ್ಲಿ ದಾಸ್ತಾನು ಪುಸ್ತಕವನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದು.

- ➢ ಸದರಿ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ನಿಗದಿತ ನಮೂನೆಯಲ್ಲಿ ಮಾಸಿಕ ವರದಿಗಳನ್ನು ತಯಾರಿಸಿ ಸಹಿ ಮಾಡಿ ಪ್ರತಿ ತಿಂಗಳು 5ನೇ ತಾರಿಕಿನೋಳಗೆ ತಾಲ್ಲೂಕು ಆರೋಗ್ಯ ಅಧಿಕಾರಿಯವರಿಗೆ ಸಲ್ಲಿಸುವುದು.

**ಸೂಚನೆ: "ಶುಚಿ" ಕಾರ್ಯಕ್ರಮದ ಕುರಿತು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–22343093 / 9449843295 / 9449843482, ಇ–ಮೇಲ್ ವಿಳಾಸ : rksk.karnataka@gmail.com ಇಲ್ಲಿ ಸಂಪರ್ಕಿಸಬಹುದು.**

ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

## ಅನುಬಂಧ – 1

## "ಶುಚಿ" ಕಾರ್ಯಕ್ರಮ – ಸ್ಯಾನಿಟರಿ ನ್ಯಾಪ್‌ಕಿನ್‌ಗಳ ದಾಸ್ತಾನು ವಿವರ

ಜಿಲ್ಲೆಯ ಹೆಸರು:– ತಿಂಗಳು:–

| ಕ್ರ ಸಂ. | ತಾಲ್ಲೂಕು ಹೆಸರು | ಒಟ್ಟು ಸ್ವೀಕರಿಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ಸ್ವೀಕರಿಸಿದ ದಿನಾಂಕ | ಶಿಕ್ಷಣ ಇಲಾಖೆಗೆ ನೀಡಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ದಾಸ್ತಾನನ್ನು ನೀಡಿದ ದಿನಾಂಕ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನೀಡಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ದಾಸ್ತಾನನ್ನು ನೀಡಿದ ದಿನಾಂಕ | ಸಮಾಜ ಕಲ್ಯಾಣ ಇಲಾಖೆಗೆ ನೀಡಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ದಾಸ್ತಾನನ್ನು ನೀಡಿದ ದಿನಾಂಕ | ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ನೀಡಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ದಾಸ್ತಾನನ್ನು ನೀಡಿದ ದಿನಾಂಕ | ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ನೀಡಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ದಾಸ್ತಾನನ್ನು ನೀಡಿದ ದಿನಾಂಕ | ಇತರೆ ಬೇರೆ ಇಲಾಖೆಗೆ ನೀಡಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸಂಖ್ಯೆ (ಇಲಾಖೆಯ ಹೆಸರನ್ನು ನಮೂದಿ ಸುವುದು) | ದಾಸ್ತಾನನ್ನು ನೀಡಿದ ದಿನಾಂಕ | ಉಳಿದ ಸ್ಯಾನಿಟರಿ ನ್ಯಾಪ್ ಕಿನ್‌ಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|
| 1 | | | | | | | | | | | | | | | | |
| 2 | | | | | | | | | | | | | | | | |
| 3 | | | | | | | | | | | | | | | | |
| 4 | | | | | | | | | | | | | | | | |
| 5 | | | | | | | | | | | | | | | | |
| ಒಟ್ಟು | | | | | | | | | | | | | | | | |

ಸೂಚನೆ: ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಸಹಿಯಾದ ವರದಿಯನ್ನು ಇ–ಮೇಲ್ ಮುಖಾಂತರ ನೋಡಲ್ ಅಧಿಕಾರಿಗಳು, "ಶುಚಿ" ಕಾರ್ಯಕ್ರಮ, ಇವರಿಗೆ ಸಲ್ಲಿಸುವುದು. (**E-mail Address: ddarsh.mh@gmail.com**)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
(ಮೊಹರಿನ ಸಮೇತ)

ಆರ್.ಸಿ.ಹೆಚ್. ಅಧಿಕಾರಿಗಳು
(ಮೊಹರಿನ ಸಮೇತ)

## ಅನುಬಂಧ – 2

## ಜಿಲ್ಲಾ ಮಟ್ಟದ ಮಾಸಿಕ ವರದಿಯ ನಮೂನೆ

ಜಿಲ್ಲೆಯ ಹೆಸರು:– ತಿಂಗಳು:–

| ಕ್ರ. ಸಂ. | ತಾಲ್ಲೂಕು ಹೆಸರು | ಜಿಲ್ಲೆಯ ಫಲಾನುಭವಿಗಳ ವಿವರ | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಶಿಕ್ಷಣ ಇಲಾಖೆ ಹದಿಹರೆಯದ ಹೆಣ್ಣು ಮಕ್ಕಳ ಫಲಾನುಭವಿಗಳೆ ಸಂಖ್ಯೆ (೬ ರಿಂದ ೧೦ ನೇ ತರಗತಿಯಲ್ಲಿನ) | | | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ (೧೦ ರಿಂದ ೧೯ ವಯಸ್ಸಿನ) | | | ಸಮಾಜ ಕಲ್ಯಾಣ ಇಲಾಖೆ ಶಾಲೆ ಮತ್ತು ವಸತಿ ನಿಲಯಗಳಲ್ಲಿನ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವಸತಿ ನಿಲಯನಲ್ಲಿ ಇರುವ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯ ವಸತಿ ನಿಲಯನಲ್ಲಿ ಇರುವ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಇತರೆ ಇಲಾಖೆ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ (ಇಲಾಖೆಯ ಹೆಸರು ನಮೂದಿಸುವುದು) | | | ಒಟ್ಟು ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | |
| | | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ |
| 1 | | | | | | | | | | | | | | | | | | | | | | |
| 2 | | | | | | | | | | | | | | | | | | | | | | |
| 3 | | | | | | | | | | | | | | | | | | | | | | |
| 4 | | | | | | | | | | | | | | | | | | | | | | |
| 5 | | | | | | | | | | | | | | | | | | | | | | |
| 6 | | | | | | | | | | | | | | | | | | | | | | |
| 7 | | | | | | | | | | | | | | | | | | | | | | |
| 8 | | | | | | | | | | | | | | | | | | | | | | |
| 9 | | | | | | | | | | | | | | | | | | | | | | |
| 10 | | | | | | | | | | | | | | | | | | | | | | |
| 11 | | | | | | | | | | | | | | | | | | | | | | |
| **Total:** | | | | | | | | | | | | | | | | | | | | | | |

ಸೂಚನೆ:

1. ಶಿಕ್ಷಣ ಇಲಾಖೆ :– ಸರ್ಕಾರಿ, ಅನುದಾನಿತ ಮತ್ತು ವಸತಿ ನಿಲಯಗಳಲ್ಲಿನ 6 ರಿಂದ 10 ನೇ ತರಗತಿಯಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :– ಇಲಾಖೆಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳಲ್ಲಿ ನೊಂದಣಿಯಾದ ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
3. ಸಮಾಜ ಕಲ್ಯಾಣ ಇಲಾಖೆ :– ಇಲಾಖೆಗೆ ಸಂಬಂಧಿಸಿದ ವಸತಿ ಶಾಲೆ (ಮುರಾರ್ಜಿ ದೇಸಾಯಿ ಶಾಲೆ) ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿಗಳಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
4. ಯುವ ಜನ ಮತ್ತು ಸೇವಾ ಇಲಾಖೆ :– ಇಲಾಖೆಗೆ ಸಂಬಂಧಿಸಿದ ವಸತಿನಿಲಯಗಳಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
5. ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ :– ಇಲಾಖೆಗೆ ಸಂಬಂಧಿಸಿದ ವಸತಿನಿಲಯಗಳಲ್ಲಿನ ಇರುವ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
6. ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಸಹಿಯಾದ ವರದಿಯನ್ನು ಇ–ಮೇಲ್ ಮುಖಾಂತರ ನೋಡಲ್ ಅಧಿಕಾರಿಗಳು, "ಶುಚಿ" ಕಾರ್ಯಕ್ರಮ, ಇವರಿಗೆ ಸಲ್ಲಿಸುವುದು. **(E-mail Address: ddarsh.mh@gmail.com)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
(ಮೊಹರಿನ ಸಮೇತ)

ಆರ್.ಸಿ.ಹೆಚ್. ಅಧಿಕಾರಿಗಳು
(ಮೊಹರಿನ ಸಮೇತ)

## ಅನುಬಂಧ – 3

### ಶಿಕ್ಷಣ ಇಲಾಖೆಯ ಮಾಸಿಕ ವರದಿಯ ನಮೂನೆ : "ಶುಚಿ" ಕಾರ್ಯಕ್ರಮ – ಜಿಲ್ಲೆಯ ಫಲಾನುಭವಿಗಳ ವಿವರ

ಜಿಲ್ಲೆಯ ಹೆಸರು:– ತಿಂಗಳು:–

| ಕ್ರ ಸಂ. | ತಾಲ್ಲೂಕು ಹೆಸರು | ತಾಲ್ಲೂಕಿನಲ್ಲಿರುವ ಒಟ್ಟು ಶಾಲೆಗಳ ಸಂಖ್ಯೆ (೬ ರಿಂದ ೧೦ ನೇ ತರಗತಿಯ ಶಾಲೆಗಳು) | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ದಾಸ್ತಾನು ಸ್ವೀಕರಿಸಿದ ಸಂಖ್ಯೆ | ಒಟ್ಟು ೬ ರಿಂದ ೧೦ ನೇ ತರಗತಿಯಲ್ಲಿ ಫಲಾನುಭವಿಗಳ ಸಂಖ್ಯೆ | | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಹಂಚಿಕೆಯಾದ ಸಂಖ್ಯೆ | | | ಉಳಿಕೆಯಾದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸಂಖ್ಯೆ | | |
|---|---|---|---|---|---|---|---|---|---|---|---|---|---|
| | | ಸರ್ಕಾರಿ ಶಾಲೆಗಳ ಸಂಖ್ಯೆ | ಅನುದಾನಿತ ಶಾಲೆಗಳ ಸಂಖ್ಯೆ | | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| 6 | | | | | | | | | | | | | |
| 7 | | | | | | | | | | | | | |
| 8 | | | | | | | | | | | | | |
| 9 | | | | | | | | | | | | | |
| 10 | | | | | | | | | | | | | |
| 11 | | | | | | | | | | | | | |
| **Total:** | | | | | | | | | | | | | |

ಸೂಚನೆ:

1. ಶಿಕ್ಷಣ ಇಲಾಖೆ :– ಸರ್ಕಾರಿ, ಅನುದಾನಿತ ಮತ್ತು ವಸತಿ ನಿಲಯಗಳಲ್ಲಿನ 6 ರಿಂದ 10 ನೇ ತರಗತಿಯಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
2. ಪ್ರತಿ ತಿಂಗಳು 5 ನೇ ತಾರಿಕಿನೊಳಗೆ ಸಹಿಯಾದ ಮಾಸಿಕ ವರದಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಂಟುಬ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸುವುದು.

ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ
(ಮೊಹರಿನ ಸಮೇತ)

## ಅನುಬಂಧ – 4

### ಬಿ.ಇ.ಓ ಮಟ್ಟದ ಮಾಸಿಕ ವರದಿ ನಮೂನೆ – "ಶುಚಿ" ಕಾರ್ಯಕ್ರಮ

ಜಿಲ್ಲೆಯ ಹೆಸರು:– ತಿಂಗಳು:–

| ಕ್ರ. ಸಂ. | ತಾಲ್ಲೂಕು ಹೆಸರು | ತಾಲ್ಲೂಕಿನಲ್ಲಿರುವ ಒಟ್ಟು ಶಾಲೆಗಳ ಸಂಖ್ಯೆ (೬ ರಿಂದ ೧೦ ನೇ ತರಗತಿಯ ಶಾಲೆಗಳು) | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ದಾಸ್ತಾನು ಸ್ವೀಕರಿಸಿದ ಸಂಖ್ಯೆ | ಒಟ್ಟು ೬ ರಿಂದ ೧೦ ನೇ ತರಗತಿಯಲ್ಲಿ ಫಲಾನುಭವಿಗಳ ಸಂಖ್ಯೆ | | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಹಂಚಿಕೆಯಾದ ಸಂಖ್ಯೆ | | | ಉಳಿಕೆಯಾದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸಂಖ್ಯೆ | | |
|---|---|---|---|---|---|---|---|---|---|---|---|---|---|
| | | ಸರ್ಕಾರಿ ಶಾಲೆಗಳ ಸಂಖ್ಯೆ | ಅನುದಾನಿತ ಶಾಲೆಗಳ ಸಂಖ್ಯೆ | | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| 6 | | | | | | | | | | | | | |
| **Total:** | | | | | | | | | | | | | |

ಸೂಚನೆ:

1. ಶಿಕ್ಷಣ ಇಲಾಖೆ :– ಸರ್ಕಾರಿ, ಅನುದಾನಿತ ಮತ್ತು ವಸತಿ ನಿಲಯಗಳಲ್ಲಿನ 6 ರಿಂದ 10 ನೇ ತರಗತಿಯಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
2. ಪ್ರತಿ ತಿಂಗಳು 3 ನೇ ತಾರೀಕಿನೊಳಗೆ ಸಹಿಯಾದ ಮಾಸಿಕ ವರದಿಯನ್ನು ತಾಲ್ಲೂಕ ಆರೋಗ್ಯ ಅಧಿಕಾರಿಗಳಿಗೆ ಮತ್ತು ಡಿ.ಡಿ.ಪಿ.ಐ ರವರಿಗೆ ಸಲ್ಲಿಸುವುದು.

ಕ್ಷೇತ್ರ ಶಿಕ್ಷಣ ಅಧಿಕಾರಿಗಳು
(ಮೊಹರಿನ ಸಮೇತ)

## ಅನುಬಂಧ – 5

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಮಾಸಿಕ ವರದಿಯ ನಮೂನೆ – ಜಿಲ್ಲೆಯ ಫಲಾನುಭವಿಗಳ ಪಟ್ಟಿ

ಜಿಲ್ಲೆಯ ಹೆಸರು:– ತಿಂಗಳು:–

| ಕ್ರ. ಸಂ. | ತಾಲ್ಲೂಕು ಹೆಸರು | ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ | ಒಟ್ಟು ಅಂಗನವಾಡಿ ಕೇಂದ್ರಗಳಲ್ಲಿನ ಫಲಾನುಭವಿಗಳ ಸಂಖ್ಯೆ | | | | ಒಟ್ಟು ಸ್ವೀಕರಿಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ಸ್ವೀಕರಿಸಿದ ದಿನಾಂಕ | ಒಟ್ಟು ವಿತರಿಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | | | | ಒಟ್ಟು ಉಳಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳು |
|---|---|---|---|---|---|---|---|---|---|---|---|---|---|
| | | | ಎಸ್.ಸಿ. | ಎಸ್.ಟಿ | ಇತರೆ | ಒಟ್ಟು | | | ಎಸ್.ಸಿ. | ಎಸ್.ಟಿ | ಇತರೆ | ಒಟ್ಟು | |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| 6 | | | | | | | | | | | | | |
| 7 | | | | | | | | | | | | | |
| **Total:** | | | | | | | | | | | | | |

ಸೂಚನೆ:

1. ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆ ಮತ್ತು ಮದುವೆಯಾದ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
2. ಪ್ರತಿ ತಿಂಗಳು 5ನೇ ದಿನಾಂಕದಂದು ಸಹಿಯಾದ ಮಾಸಿಕ ವರದಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಂಟುಬ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸುವುದು.

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ಅನುಬಂಧ – 6

### ವಸತಿ ನಿಲಯದ ಮಾಸಿಕ ವರದಿಯ ನಮೂನೆ – ಫಲಾನುಭವಿಗಳ ವಿವರ

ಜಿಲ್ಲೆಯ ಹೆಸರು:–

ತಿಂಗಳು:–

| ಕ್ರ ಸಂ. | ತಾಲ್ಲೂಕು ಹೆಸರು | ವಸತಿ ನಿಲಯಗಳಲ್ಲಿನ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | | ಒಟ್ಟು ಸ್ವಿಕರಿಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | ಸ್ವೀಕರಿಸಿದ ದಿನಾಂಕ | ಒಟ್ಟು ವಿತರಿಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಸಂಖ್ಯೆ | | | | ಒಟ್ಟು ಉಳಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೇಟಗಳು |
|---|---|---|---|---|---|---|---|---|---|---|---|---|
| | | ಎಸ್.ಸಿ. | ಎಸ್.ಟಿ | ಇತರೆ | ಒಟ್ಟು | | | ಎಸ್.ಸಿ. | ಎಸ್.ಟಿ | ಇತರೆ | ಒಟ್ಟು | |
| 1 | | | | | | | | | | | | |
| 2 | | | | | | | | | | | | |
| 3 | | | | | | | | | | | | |
| 4 | | | | | | | | | | | | |
| 5 | | | | | | | | | | | | |
| 6 | | | | | | | | | | | | |
| 7 | | | | | | | | | | | | |
| | ಒಟ್ಟು: | | | | | | | | | | | |

ಸೂಚನೆ:

1. ಪ್ರತಿ ತಿಂಗಳು 5 ನೇ ದಿನಾಂಕದಂದು ಸಹಿಯಾದ ಮಾಸಿಕ ವರದಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸಿವುದು.
2. ಸದರಿ ನಮೂನೆಯನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ಯುವಜನ ಮತ್ತು ಕ್ರೀಡಾ ಇಲಾಖೆಯವರು ಭರ್ತಿ ಮಾಡತಕ್ಕದ್ದು.

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು
(ಸಹಿ ಮತ್ತು ಮೊಹರು)

## ಅನುಬಂಧ – 7

### ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಾಸಿಕ ವರದಿಯ ನಮೂನೆ : "ಶುಚಿ" ಕಾರ್ಯಕ್ರಮ – ಜಿಲ್ಲೆಯ ಫಲಾನುಭವಿಗಳ ವಿವರ

ಜಿಲ್ಲೆಯ ಹೆಸರು:– ತಿಂಗಳು:–

| ಕ್ರ ಸಂ. | ತಾಲ್ಲೂಕು ಹೆಸರು | ತಾಲ್ಲೂಕಿನಲ್ಲಿರುವ ಒಟ್ಟು ಶಾಲೆಗಳ ಸಂಖ್ಯೆ (೬ ರಿಂದ ೧೦ ನೇ ತರಗತಿಯ ಶಾಲೆಗಳು) | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ದಾಸ್ತಾನು ಸ್ವೀಕರಿಸಿದ ಸಂಖ್ಯೆ | ಒಟ್ಟು ೬ ರಿಂದ ೧೦ ನೇ ತರಗತಿಯಲ್ಲಿ ಫಲಾನುಭವಿಗಳ ಸಂಖ್ಯೆ | | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಹಂಚಿಕೆಯಾದ ಸಂಖ್ಯೆ | | | ಉಳಿಕೆಯಾದ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಸಂಖ್ಯೆ | | |
|---|---|---|---|---|---|---|---|---|---|---|---|---|---|
| | | ಸರ್ಕಾರಿ ಶಾಲೆಗಳ ಸಂಖ್ಯೆ | ಅನುದಾನಿತ ಶಾಲೆಗಳ ಸಂಖ್ಯೆ | | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| **Total:** | | | | | | | | | | | | | |

ಸೂಚನೆ:

1. ಸರ್ಕಾರಿ, ಅನುದಾನಿತ ಮತ್ತು ವಸತಿ ನಿಲಯಗಳಲ್ಲಿನ 6 ರಿಂದ 10 ನೇ ತರಗತಿಯಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು
(ಮೊಹರಿನ ಸಮೇತ)

## ಅನುಬಂಧ – 2

### ಜಿಲ್ಲಾ ಮಟ್ಟದ ವಾರ್ಷಿಕ ವರದಿಯ ನಮೂನೆ – 20 – (ಏಪ್ರಿಲ್–20 ರಿಂದ ಮಾರ್ಚ್–20 ರವರೆಗೆ)

ಜಿಲ್ಲೆಯ ಹೆಸರು:–

| ಕ್ರ. ಸಂ. | ತಾಲ್ಲೂಕು ಹೆಸರು | ಜಿಲ್ಲೆಯ ಫಲಾನುಭವಿಗಳ ವಿವರ | | | | | | | | | | | | | | | | | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಶಿಕ್ಷಣ ಇಲಾಖೆ ಹದಿಹರೆಯದ ಹೆಣ್ಣು ಮಕ್ಕಳ ಫಲಾನುಭವಿಗಳ ಸಂಖ್ಯೆ (೬ ರಿಂದ ೧೦ ನೇ ತರಗತಿಯಲ್ಲಿನ) | | | ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ (೧೦ ರಿಂದ ೧೯ ವಯಸ್ಸಿನ) | | | ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | | ಸಮಾಜ ಕಲ್ಯಾಣ ಇಲಾಖೆ ಶಾಲೆ ಮತ್ತು ವಸತಿ ನಿಲಯಗಳಲ್ಲಿನ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | | ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವಸತಿ ನಿಲಯನಲ್ಲಿ ಇರುವ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | | ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯ ವಸತಿ ನಿಲಯನಲ್ಲಿ ಇರುವ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | | ಒಟ್ಟು ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆ | | | ಒಟ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳ ಹಂಚಿಕೆಯಾದ ವಿವರ (ಒಂದು ಮಗುವಿಗೆ ಎಷ್ಟು ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಕೆಟ್‌ಗಳನ್ನು ನೀಡಿದೆ ಎಂಬುದನ್ನು ನಮೂದಿಸಿ) | | |
| | | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ | ಎಸ್.ಸಿ. | ಎಸ್.ಟಿ | ಇತರೆ |
| 1 | | | | | | | | | | | | | | | | | | | | | | | | | | | | | | | | | | | | | | | | | | | |
| 2 | | | | | | | | | | | | | | | | | | | | | | | | | | | | | | | | | | | | | | | | | | | |
| 3 | | | | | | | | | | | | | | | | | | | | | | | | | | | | | | | | | | | | | | | | | | | |
| 4 | | | | | | | | | | | | | | | | | | | | | | | | | | | | | | | | | | | | | | | | | | | |
| 5 | | | | | | | | | | | | | | | | | | | | | | | | | | | | | | | | | | | | | | | | | | | |

| | | | | | | | | | | | | | | | | | | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| 6 | | | | | | | | | | | | | | | | | | | | | | | | | | | | | | | | | | | | | | | | | | |
| 7 | | | | | | | | | | | | | | | | | | | | | | | | | | | | | | | | | | | | | | | | | | |
| 8 | | | | | | | | | | | | | | | | | | | | | | | | | | | | | | | | | | | | | | | | | | |
| 9 | | | | | | | | | | | | | | | | | | | | | | | | | | | | | | | | | | | | | | | | | | |
| 10 | | | | | | | | | | | | | | | | | | | | | | | | | | | | | | | | | | | | | | | | | | |
| 11 | | | | | | | | | | | | | | | | | | | | | | | | | | | | | | | | | | | | | | | | | | |
| Total: | | | | | | | | | | | | | | | | | | | | | | | | | | | | | | | | | | | | | | | | | | |

ಸೂಚನೆ:

1. ಶಿಕ್ಷಣ ಇಲಾಖೆ :- ಸರ್ಕಾರಿ, ಅನುದಾನಿತ ಮತ್ತು ವಸತಿ ನಿಲಯಗಳಲ್ಲಿನ 6 ರಿಂದ 10 ನೇ ತರಗತಿಯಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :- ಇಲಾಖೆಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳಲ್ಲಿ ನೊಂದಣಿಯಾದ ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
3. ಸಮಾಜ ಕಲ್ಯಾಣ ಇಲಾಖೆ :- ಇಲಾಖೆಗೆ ಸಂಬಂಧಿಸಿದ ವಸತಿ ಶಾಲೆ (ಮುರಾರ್ಜಿ ದೇಸಾಯಿ ಶಾಲೆ) ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿಗಳಲ್ಲಿನ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
4. ಯುವ ಜನ ಮತ್ತು ಸೇವಾ ಇಲಾಖೆ :- ಇಲಾಖೆಗೆ ಸಂಬಂಧಿಸಿದ ವಸತಿನಿಲಯಗಳಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
5. ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ :- ಇಲಾಖೆಗೆ ಸಂಬಂಧಿಸಿದ ವಸತಿನಿಲಯಗಳಲ್ಲಿನ ಇರುವ ಹದಿಹರೆಯದ ಹೆಣ್ಣು ಮಕ್ಕಳ ಸಂಖ್ಯೆಯನ್ನು ನಮೂದಿಸುವುದು.
6. ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಸಹಿಯಾದ ವರದಿಯನ್ನು ಇ-ಮೇಲ್ ಮುಖಾಂತರ ನೋಡಲ್ ಅಧಿಕಾರಿಗಳು, "ಶುಚಿ" ಕಾರ್ಯಕ್ರಮ, ಇವರಿಗೆ ಸಲ್ಲಿಸುವುದು. (**E-mail Address: ddarsh.mh@gmail.com**)

ಸಹಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು

(ಮೊಹರಿನ ಸಮೇತ)

ಸಹಿ
ಆರ್.ಸಿ.ಹೆಚ್. ಅಧಿಕಾರಿಗಳು

(ಮೊಹರಿನ ಸಮೇತ)